**ಓ ಎಸ್ ನಂಃ 124/2011** **ಪಿ ಡಬ್ಲೂ - 2**

**ಸಾಕ್ಷಿಯನ್ನು ದಿನಾಂಕಃ 19.04.2025 ರಂದು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ** ವಾದಿಯ ಪರ ಶ್ರೀ. ಎನ್ ಎಸ್ ಯು ವಕೀಲರಿಂದ

ಸಾಕ್ಷಿಗೆ ನಿಪಿ25 ನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ25(ಎ) ಎಂದು, ಸಾಕ್ಷಿಯು ನಿಪಿ25 ರಲ್ಲಿರುವ ಫಕರುಸಾಬ ರವರ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ25(ಬಿ), (ಸಿ) ಮತ್ತು (ಡಿ) ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಫಕರುಸಾಬರವರು ನಿಪಿ25 ಕ್ಕೆ ಸಹಿ ಮಾಡಿದರು. ನಿಪಿ25 ನ್ನು ಎಸ್ ಜಿ ಅರಳಿ ವಕೀಲರು ಮಾಡಿಸಿದರು.

**ಮುಂದುವರೆದ ಪಾಟೀ ಸವಾಲುಃ** ಪ್ರತಿವಾದಿಯ ಪರ ಶ್ರೀ. ಎನ್ ಎಮ್ ಐ ವಕೀಲರಿಂದ

ನಾನು ಬಿ.ಕಾಂ. ಪದವಿದರ. ಅರಳಿ ವಕೀಲರು ಕಲಘಟಗಿ ತಾಲೂಕಿನವರು ಅಲ್ಲ ಎಂದರೆ ಸರಿ. ನಿಪಿ25 ರ ಮೂಲ ದಾಖಲೆಯನ್ನು ಅರಳಿ ವಕೀಲರು ತಯಾರು ಮಾಡಿದರು. ಅರಳಿ ವಕೀಲರು ಮಾಡಿಸಿರುವುದು ಸತ್ಯವೋ ಅಥವಾ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಹಾಗೆ ಆರ್ ಎಸ್ ಉಡುಪಿ ವಕೀಲರು ಮಾಡಿಸಿರುವುದು ಸತ್ಯವೋ ಎಂದರೆ ಸಾಕ್ಷಿಯು ಇಬ್ಬರು ಸೇರಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ನಿಪಿ25 ತಯಾರು ಮಾಡಿದ ಸಮಯ ಗೊತ್ತಿಲ್ಲ. ನಿಪಿ25(ಬಿ), (ಸಿ) ಮತ್ತು (ಡಿ)ಗಳ ಮಧ್ಯೆ ವ್ಯತ್ಯಾಸ ಇದೆ ಎಂದರೆ ಸರಿ. ಅರಳಿ ವಕೀಲರ ಮತ್ತು ಆರ್ ಎಸ್ ಉಡುಪಿ ವಕೀಲರ ಸಹಿಗಳು ನಿಪಿ25 ರಲ್ಲಿ ಇಲ್ಲ. ನಿಪಿ25 ರಲ್ಲಿರುವ ನೋಟರಿ ಮುದ್ರೆಯನ್ನು ಎಲ್ಲಿ ಮತ್ತು ಯಾರು ಹಾಕಿದರು ಎಂದು ಗೊತ್ತಿಲ್ಲ. ನಿಪಿ25 ರಲ್ಲಿ ಖಾಸಿಮಸಾಬ ಬುಡನಖಾನ ಮತ್ತು ಎಸ್ ಐ ದಾಲಾಲ ರವರ ಸಹಿಗಳು ಇವೆ. ಖಾಸಿಮಸಾಬ ಬುಡನಖಾನ ಮತ್ತು ಎಸ್ ಐ ದಾಲಾಲರವರ ಸಹಿಗಳನ್ನು ಬೇರೆ ಕಡೆ ನೋಡಿಲ್ಲ. ಫಕರುಸಾಬರವರು ನೂರಜಾನ ರವರ ಮನೆಯಲ್ಲಿ ಕೆಲಸ ಮಾಡಿಕೊಂಡು ಇದ್ದರು ಎಂದರೆ ಸರಿ. ಫಕರುಸಾಬರವರು ಮದ್ಯವ್ಯಸನಿ ಎಂದರೆ ಗೊತ್ತಿಲ್ಲ. ಫಕರುಸಾಬರವರಿಗೆ ವಯಸ್ಸಾಗಿದ್ದ ಕಾರಣ ಅವರಿಗೆ ಮಾಡುವ ಕೆಲಸದ ಅರಿವು ಇರಲಿಲ್ಲ ಎಂದರೆ ಗೊತ್ತಿಲ್ಲ. ನನಗೆ ಯಾವುದೇ ವಿಚಾರ ಗೊತ್ತಿಲ್ಲದೇ ಇದ್ದರು ಸಹ ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತೇನೆ ಎಂದರೆ ಸರಿಯಲ್ಲ. ನಿಪಿ25 ರ ಸಂಗತಿಗಳನ್ನು ನಮಗೆ ಓದಿ ಹೇಳಿದರು. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**